UASB
LIBRARY
Newspaper Clippings
Pg .1 Wednesday 26-05-2021 Jai Kisan



ಚೀನಾದ ಹಸಿವು ಹಿಂಗಿಸಿದ ಹೈಬ್ರೀಡ್ ಅಕ್ಕಿ ಪಿತ



ಅದು ಚೀನಾ ಹಿಂದೆಂದೂ ಕಂಡರಿಯದಂತಹ ಭೀಕರ ಕ್ಷಾಮ. ಎಲ್ಲೆಂದರಲ್ಲಿ ಈ ಚೆಲ್ಲಾಡಿದಂತೆ ಬಿದ್ದಿರುವ ಹೆಣಗಳನ್ನು ನೋಡಿದರೆ ಎಂಥ ಕಲ್ಲೆದೆಯೂ ಆರ್ದ್ರವಾಗಿ ಹೋಗಬೇಕು....ಅಂಥ ದಾರುಣವಾದ ಸನ್ನಿವೇಶ. ಇದನ್ನು ನೋಡಿದ ಕೃಷಿ ವಿಜ್ಞಾನಿ ಯುವಾನ್ ಲಾಂಗ್‌ಪಿಂಗ್ ಅವರ ಮೈ ಮರಗಟ್ಟಿ ಹೋಯಿತು. ಅಂದೇ ನಿರ್ಧರಿಸಿದರು. ಇನ್ನು ಮುಂದೆ ಚೀನಾದಲ್ಲಿ ಯಾವತ್ತೂ ಹಸಿವಿನ ಆಕ್ರಂದನ ಕೇಳಬಾರದು. ಹಾಗೆ ಏನಾದರೂ ಮಾಡಲೇಬೇಕು ಎಂದು. 1960ರಲ್ಲಿ ಅವರು ನೋಡಿದ ಮನಕಲಕುವ ದೃಶ್ಯವೇ ಮುಂದೆ ಹೈಬ್ರಿಡ್ ಅಕ್ಕಿ ಸಂಶೋಧನೆಗೆ ನಾಂದಿಯಾಯಿತು.

ಮೇ.22ರಂದು ತಮ್ಮ 91ನೇ ವಯಸ್ಸಿನಲ್ಲಿ ನಿಧನರಾದ ಲಾಂಗ್‌ಪಿಂಗ್ ಜಾಗತಿಕ ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಅವರು ಸಂಶೋಧಿಸಿದ ಹೈಬ್ರಿಡ್ ಅಕ್ಕಿ ಚೀನಾದ ಕೋಟ್ಯಂತರ ಜನರ ಹಸಿವು ಹಿಂಗಿಸುವಲ್ಲಿ ಯಶಸ್ವಿಯಾಯಿತು. ಹಿಂದೆಂದೂ ಕಂಡರಿಯದ ರೀತಿಯಲ್ಲಿ ಚೀನಾಕ್ಕೆ ಆಹಾರ ಭದ್ರತೆಯನ್ನು ಒದಗಿಸಿಕೊಟ್ಟಿತು. ಯುವಾನ್ ಲಾಂಗ್‌ಪಿಂಗ್ ಅವರು ಹೈಬ್ರಿಡ್ ಅಕ್ಕಿ ಪಿತನಾಗಿ ಹೊರಹೊಮ್ಮಿದರು. ಈ ವರ್ಷ ಮಾರ್ಚ್ ತಿಂಗಳಲ್ಲಿ ಅನಾರೋಗ್ಯ ಪೀಡಿತರಾಗುವವರೆಗೂ ಅವರು ಸಂಶೋಧನಾ ಚಟುವಟಿಕೆಯಲ್ಲಿ ನಿರತರಾಗಿದ್ದರು.

ಅಧಿಕ ಇಳುವರಿ ನೀಡುವ ಹೈಬ್ರಿಡ್ ಅಕ್ಕಿ ತಳಿ ಹಾಗೂ ಅದರ ಬೆಳವಣಿಗೆಗೆ ಪೂರಕವಾದ ತಂತ್ರಜ್ಞಾನವನ್ನು ಸಂಶೋಧನೆ ಮಾಡಿದ್ದಕ್ಕಾಗಿ ಲಾಂಗ್‌ಪಿಂಗ್ ಅವರಿಗೆ 2004ರಲ್ಲಿ ಜಾಗತಿಕ ಆಹಾರ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಹೊಸ ತಂತ್ರಜ್ಞಾನವನ್ನು ವಿವಿಧ ದೇಶಗಳ ಕೃಷಿ ರಂಗದಲ್ಲಿ ಅಳವಡಿಸಿಕೊಳ್ಳಲಾಯಿತು. ಲಾಂಗ್‌ಪಿಂಗ್ ಹಾಗೂ ಅವರ ಶಿಷ್ಯರು ಭಾರತ, ವಿಯಟ್ನಾಮ್, ಮಯನ್ಮಾರ್, ಬಾಂಗ್ಲಾದೇಶ, ಶ್ರೀಲಂಕಾ ಹಾಗೂ ಅಮೆರಿಕಗಳಿಗೆ ಭೇಟಿ ನೀಡಿ ಈ ದೇಶಗಳಲ್ಲಿನ ಅಕ್ಕಿ ಸಂಶೋಧಕರಿಗೆ ಮಾರ್ಗದರ್ಶನ ಮಾಡಿದ್ದಾರೆ. 50ಕ್ಕೂ ಅಧಿಕ ದೇಶಗಳ 3000ಕ್ಕೂ ಹೆಚ್ಚು ಕೃಷಿ ವಿಜ್ಞಾನಿಗಳಿಗೆ ತರಬೇತಿ ನೀಡಿದ್ದಾರೆ.

ಮನಕಲಕುವ ಭೀಕರ ಕ್ಷಾಮ

ಹೈಬ್ರೀಡ್ ಅಕ್ಕಿ ತಳಿಯನ್ನು ಬೆಳೆಸುವ ತಂತ್ರಜ್ಞಾನವನ್ನು ಆಧರಿಸಿ ಮುಂದೆ ಹೈಬ್ರಿಡ್ ಜೋಳ ಹಾಗೂ ಸಾಸಿವೆ ತಳಿಯನ್ನೂ ಅಭಿವೃದ್ಧಿಪಡಿಸಲಾಯಿತು. ಲಾಂಗ್‌ಪಿಂಗ್ ಅವರು 30ನೇ ವಯಸ್ಸಿನಲ್ಲಿದ್ದಾಗ 1960ರಲ್ಲಿ ಚೀನಾವನ್ನು ನಡುಗಿಸಿದ ಭೀಕರ ಕ್ಷಾಮಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಈ ಸಂದರ್ಭದಲ್ಲಿ ಅವರು ಚೀನಾದ ರಾಷ್ಟ್ರೀಯ ದೂರದರ್ಶನ ಸಂಸ್ಥೆಯಾದ ಸಿಸಿಟಿವಿಗೆ ನೀಡಿದ ಸಂದರ್ಶನದಲ್ಲಿ ಅಂದಿನ ಹೃದಯವಿದ್ರಾವಕ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದರು. 'ಅಂದು ನಾನು ಬೀದಿಯಲ್ಲಿ ಸಂಚರಿಸುವಾಗ ಬದಿಗೆ ಬಿದ್ದಿದ್ದ ಎರಡು ಹೆಣಗಳನ್ನು ನೋಡಿದೆ. ಅವುಗಳು ಹೇಗಿದ್ದವೆಂದರೆ ಅಸ್ಥಿಪಂಜರಕ್ಕೆ ಚರ್ಮವನ್ನು ಹೊದೆಸಿಟ್ಟ ಹಾಗಿದ್ದವು.' ಈ ಮಾತು ಹೇಳಿ ಮುಗಿಸಿದ ನಂತರ ಅವರ ಕಣ್ಣು ಹನಿಗೂಡಿದ್ದವು. 'ಆಹಾರ ಧಾನ್ಯ ಸಣ್ಣದು ಎಂದು ಕಡೆಗಣಿಸಬೇಡಿ. ಅದು ದೇಶವನ್ನು ರಕ್ಷಿಸಲೂಬಲ್ಲದು, ಅಭಾವವಾದರೆ ಅಧೋಗತಿಗೂ ತಳ್ಳಬಲ್ಲದು' ಎಂಬುದು ಅವರ ಪ್ರಸಿದ್ಧ ನಾಣ್ಣುಡಿ. ಭೀಕರ ಕ್ಷಾಮದಿಂದ ಆಹಾರ ಧಾನ್ಯದ ಕೊರತೆಯಾಗಿ ಚೀನಾದಲ್ಲಿ ದಶಲಕ್ಷಗಟ್ಟಲೆ ಜನರು ಹಸಿವಿನಿಂದ ನರಳಿ ಪ್ರಾಣಬಿಟ್ಟ ದೃಶ್ಯವನ್ನು ನೆನೆಸಿಕೊಂಡರೆ ಈ ಮಾತಿನ ಮಹತ್ವ ಅರ್ಥವಾಗುತ್ತದೆ.

ಸಾಂಪ್ರದಾಯಿಕ ತಳಿಶಾಸ್ತ್ರದ ಪ್ರಕಾರ ಭತ್ತ ಬೆಳೆಯಲ್ಲಿ ಹೆಟೆರೋಸಿಸ್ ಪ್ರಕ್ರಿಯೆ ಜರುಗುವದು ಅಸಾಧ್ಯ. ಆದರೆ ಅಕ್ಕಿ ವಿಷಯದಲ್ಲಿ ಇದು ಸಾಧ್ಯ ಎಂಬುದನ್ನು ಲಾಂಗ್‌ಪಿಂಗ್ ತೋರಿಸಿಕೊಟ್ಟರು. 1964ರಲ್ಲಿ ಪ್ರಕಟಿಸಿದ ಲೇಖನದಲ್ಲಿ ಅವರು ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಇದಾದ ಒಂಭತ್ತು ವರ್ಷಗಳ ನಂತರ ಅವರು ನ್ಯಾನ್-ಯು ನಂ.2 ಎಂಬ ಹೈಬ್ರೀಡ್ ಅಕ್ಕಿ ತಳಿಯನ್ನು ಅಭಿವೃದ್ಧಿಪಡಿಸಿದರು. ಇದು ಹೆಟೆರೋಸಿಸ್ ಪ್ರಕ್ರಿಯೆ ಮೂಲಕವೇ ಬೆಳೆದಿದ್ದು, ಹಿಂದಿನ ತಳಿಗಳಿಗಿಂತ ಶೇ.20ಕ್ಕಿಂತ ಅಧಿಕ ಪ್ರಮಾಣದ ಇಳುವರಿಯನ್ನು ನೀಡಬಲ್ಲದ್ದಾಗಿದೆ. ಈ ಸಂಶೋಧನೆಯ ಪರಿಣಾಮವಾಗಿ 1990ರ ಹೊತ್ತಿಗೆ ಚೀನಾದಲ್ಲಿ ಅಕ್ಕಿ ಉತ್ಪಾದನೆ ಶೇ.47.5ರಷ್ಟು ಹೆಚ್ಚಳವಾಯಿತು. 2001ರಲ್ಲಿ ವಿಜ್ಞಾನದ ನೋಬೆಲ್ ಎಂದೇ ಖ್ಯಾತವಾದ ಪ್ರತಿಷ್ಠಿತ ರೆಮೋನ್ ಮ್ಯಾಗ್ಸೇಸೆ ಪ್ರಶಸ್ತಿಯೂ ಅವರಿಗೆ ಲಭಿಸಿತು. ಹೀಗಾಗಿ ಚೀನಾದ ಕೋಟ್ಯಂತರ ಜನ ಇಂದಿಗೂ ಯುವಾನ್ ಲಾಂಗ್‌ಪಿಂಗ್ ಅವರ ಹೆಸರು ಹೇಳಿಕೊಂಡು ಊಟ ಮಾಡುವಂತಾಗಿದೆ.

ಈ ಬಾರಿ ಗೋದಿ ಬಂಪರ್ ಫಸಲು



ಗೋದಿ ಬೆಳೆ ಹೆಕ್ಟೇರ್‌ವಾರು ಕ್ಷೇತ್ರ ಹೆಚ್ಚಿರುವ ಹಿನ್ನೆಲೆಯಲ್ಲಿ ಈ ವರ್ಷ ದೇಶದಲ್ಲಿ ಗೋದಿ ಉತ್ಪಾದನೆ ಹೆಚ್ಚಳವಾಗುವ ಸಾಧ್ಯತೆ ಇದೆ. ಈ ಬಾರಿ 109.24 ದಶಲಕ್ಷ ಟನ್ ಉತ್ಪಾದನೆಯಾಗಲಿದೆ ಎಂದು ಕೇಂದ್ರ ಸರಕಾರ ಅಂದಾಜಿಸಿದೆ.

ಗೋದಿ ಬೆಳೆಯುವ ಪ್ರಮುಖ ರಾಜ್ಯವಾದ ಪಂಜಾಬ್‌ನಲ್ಲಿ ಇಳುವರಿ ಎಕರೆಗೆ 2-3 ಕ್ವಿಂಟಲ್‌ದಷ್ಟು ಕುಸಿಯುವ ಸಂಭವ ಇದೆ ಎಂದು ಕೆಲವು ವರದಿಗಳು ತಿಳಿಸಿವೆ. ಮಧ್ಯಪ್ರದೇಶದಲ್ಲೂ ಇಳುವರಿ ಪ್ರಮಾಣ ಕುಸಿಯುವ ಸಂಭವ ಇದೆ ಎಂದು ಹೇಳಲಾಗಿದೆ. ಜನವರಿ ಮತ್ತು ಫೆಬ್ರುವರಿಯಲ್ಲಿ ಉಂಟಾದ ಹವಾಮಾನ ವೈಪರೀತ್ಯದಿಂದಾಗಿ ಪಂಜಾಬ್‌ನಲ್ಲಿ ಗೋದಿ ಇಳುವರಿ ಶೇ.10ರಷ್ಟು ಕಡಿಮೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಡಿಸೆಂಬರ್‌ನಲ್ಲಿ ತೀವ್ರ ಪ್ರಮಾಣದ ಮಂಜು ಬಿದ್ದ ಕಾರಣ ಮಧ್ಯಪ್ರದೇಶದಲ್ಲಿ ಗೋದಿ ಬೆಳೆಯ ಮೇಲೆ ದುಷ್ಪರಿಣಾಮ ಉಂಟಾಗಿದೆ. ಕಳೆದ ವರ್ಷ ಪ್ರತಿ ಹೆಕ್ಟೇರ್‌ಗೆ 7.5 ಟನ್ ಗೋದಿ ಇಳುವರಿ ದೊರಕಿತ್ತು. ಈ ಬಾರಿ ಅದು ಸುಮಾರು 6 ಟನ್‌ಗೆ ಇಳಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ಅಗ್ರಸ್ಥಾನದಲ್ಲಿ ಉತ್ತರಪ್ರದೇಶ

ಸದ್ಯಕ್ಕೆ ಗೋದಿ ಉತ್ಪಾದನೆಯಲ್ಲಿ ಉತ್ತರಪ್ರದೇಶ ದೇಶದಲ್ಲೇ ಅಗ್ರಸ್ಥಾನದಲ್ಲಿದ್ದು, ಒಟ್ಟು ಉತ್ಪಾದನೆಯಲ್ಲಿ ಶೇ.30ರಷ್ಟು ಪಾಲು ಹೊಂದಿದೆ. ಪಂಜಾಬ್ ಶೇ.18 ಹಾಗೂ ಮಧ್ಯಪ್ರದೇಶ ಶೇ.16ರಷ್ಟು ಪಾಲು ಹೊಂದಿವೆ. ಈ ಬಾರಿ ತೇವಾಂಶ ವಾಡಿಕೆಯ ಶೇ.12ರ ಪ್ರಮಾಣಕ್ಕಿಂತ ಕಡಿಮೆಯಾಗಿದ್ದು, ಶೇ.8-9ರಷ್ಟಾಗಿದೆ. ಇದು ಕೂಡ ಇಳುವರಿ ಕಡಿಮೆಯಾಗಲು ಕಾರಣವಾಗಿದೆ. ಈ ವರ್ಷ 34.63 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗೋದಿ ಬೆಳೆಯಲಾಗಿದೆ. ಕಳೆದ ವರ್ಷ ಇದು 33.64 ದಶಲಕ್ಷ ಹೆಕ್ಟೇರ್‌ದಷ್ಟಿತ್ತು.

ಏ.1ರ ಹೊತ್ತಿಗೆ ಕೇಂದ್ರ ಸರಕಾರದ ಗೋದಿ ದಾಸ್ತಾನು ಪ್ರಮಾಣ 27 ದಶಲಕ್ಷ ಟನ್‌ದಷ್ಟಾಗಿದೆ. ಈಗ ಮತ್ತೆ ಉತ್ಪಾದನೆ ಹೆಚ್ಚಾಗಿ ಸರಕಾರ ಮತ್ತೆ ಗೋದಿ ಖರೀದಿ ಚಟುವಟಿಕೆ ನಡೆಸಿದರೆ ದಾಸ್ತಾನು ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ. ಈ ಸಂದರ್ಭದಲ್ಲಿ ಗೋದಿ ಬೆಲೆ ಕುಸಿತದ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಇನ್ನು ಸರಕಾರದ ಗೋದಾಮುಗಳಲ್ಲಿ ಗೋದಿ ದಾಸ್ತಾನು ನಿರ್ವಹಣೆ ಕೊಂಚ ಕಷ್ಟವಾಗಬಹುದು. ಹೀಗಾಗಿ ಗೋದಿಯ ಗುಣಮಟ್ಟ ಕುಸಿಯುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಇನ್ನೊಂದು ಮೂಲದ ಪ್ರಕಾರ 2021-22ನೇ ಸಾಲಿನಲ್ಲಿ ಜಾಗತಿಕ ಗೋದಿ ಉತ್ಪಾದನೆ ಪ್ರಮಾಣ 790 ದಶಲಕ್ಷ ಟನ್‌ಗೆ ಏರಿಕೆಯಾಗಲಿದೆ. ಕಳೆದ ವರ್ಷ ಇದು 773 ದಶಲಕ್ಷ ಟನ್‌ದಷ್ಟಿತ್ತು. ಹೀಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಭಾರತದ ಗೋದಿಗೆ ಬೇಡಿಕೆ ಬರುವ ಸಾಧ್ಯತೆ ಕಡಿಮೆ. ಒಟ್ಟಿನಲ್ಲಿ ಗೋದಿ ಉತ್ಪಾದನೆ ಹೆಚ್ಚುವುದು ಸರಕಾರದ ಪಾಲಿಗೆ ತಲೆನೋವಿನ ಸಂಗತಿ. ಈ ಸವಾಲನ್ನು ಅದು ಹೇಗೆ ಎದುರಿಸುವದು ಎಂಬುದನ್ನು ಕಾದು ನೋಡಬೇಕಿದೆ.

26-05-2021
Sk Pg 10

UASB LIBRARY
Newspaper Clippings
Pg .2 Wednesday 26-05-2021 Jai Kisan





The processing of jackfruit into jackfruit cubes at the Phalada Agro Research Foundation unit in Bengaluru.

Popularity of vegan products jacks up demand for wonder fruit

B'luru firm exports 10.2 MT of jackfruit powder, cubes to Germany

NIRANJAN KAGGERE
BENGALURU, DHNS

Bengaluru on Tuesday exported a whopping 10.2 metric tonnes of gumless jackfruit powder and jackfruit cubes to Germany.

Sourced from various parts of Karnataka to meet the growing demand for vegan products in European countries, the organic jackfruits were processed at the pack house of the Bengaluru-based Phalada Agro Research Foundation.

The consignment consisting of jackfruit flour, largely used in the baking industry as part of the gluten-free movement, and jackfruit cubes were exported to Germany via sea route, officials said.

C M N Shastry, chairperson and managing director of Phalada Agro Research Foundation, told *DH* that this would empower the farmers economically, besides getting a global market for their produce.

"Jackfruit is often chosen as an alternative to shredded meat in the West, due to its texture and rich fibre content besides being packed with almost every vitamin, protein and mineral needed by us. The fruit and its products are in great demand overseas," Sastry explained.

Though most households in rural Karnataka have jackfruit trees, not all fruits are consumed. Most of the times, they are left to rot or eaten by animals. But now with the steady demand for the fruit, farmers are seeing it as an additional source of income.

"As jackfruit crop does not require any spray or maintenance, it is free from pesticides or other chemical content, providing wholesome nutrient at affordable costs. Besides turning out to be an additional income to our farmers and doubling their income as envisioned by Prime Minister Narendra Modi, fruits that are usually left to rot are fed into the mainstream. Realising the economic importance of the tree, no one will cut it, thus aiding conservation," Sastry said.

Assisted by the Agricultural and Processed Food Products Export Development Authority (APEDA), Phalada has processed raw jackfruits sourced from Malnad, coastal Karnataka and other places.

A few weeks ago, 1.2 metric tonnes of organic jackfruits were exported to London from Tripura, officials said.

Phalada is an agro company registered with APEDA and consists of 1,500 farmers holding about 12,000 acres, cultivating medicinal, aromatic herbs, coconut, jackfruit, mango, spices and coffee, using organic methods.

26-05-2021
Dec Hrd Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in